7. ಗಮನ ಸೆಳೆಯುವ ಸೂಚನೆ

ವಿಷಯ:- (ಅ) ಬೆಂಗಳೂರು ನಗರದ ಚಿಕ್ಕಪೇಟೆ, ಗಾಂಧಿನಗರ, ಶಿವಾಜಿನಗರ ಭಾರತೀನಗರ, ಚಾಮರಾಜಪೇಟೆ, ಶಾಂತಿನಗರ ಹಾಗೂ ಜಯಮಹಲ್ ವಿದಾನಸಭಾ ಕ್ಷೇತ್ರಗಳಲ್ಲಿ ಒಳಚರಂಡಿ ವ್ಯವಸ್ಥೆ.

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಚಿಕ್ಕಪೇಟೆ, ಗಾಂಧಿನಗರ, ಶಿವಾಜಿನಗರ, ಭಾರತೀನಗರ, ಚಾಮರಾಜಪೇಟೆ, ಶಾಂತಿನಗರ ಹಾಗೂ ಜಯಮಹಲ್ ವಿಧಾನಸಭಾ ಕ್ಷೇತ್ರಗಳಲ್ಲಿ ಒಳಚರಂಡಿ ವ್ಯವಸ್ಥೆ ಹದಗೆಟ್ಟಿರುವುದರಿಂದ ತಗ್ಗುಪ್ರದೇಶದಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಅನಂತನಾಗ್ (ನಗರಾಭಿವೃದ್ಧಿ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಚಿಕ್ಕಪೇಟೆ, ಗಾಂಧಿನಗರ, ಶಿವಾಜಿನಗರ, ಭಾರತೀನಗರ, ಚಾಮರಾಜಪೇಟೆ, ಶಾಂತಿನಗರ ಹಾಗೂ ಜಯಮಹಲ್ ವಿಧಾನಸಭಾ ಕ್ಷೇತ್ರಗಳಲ್ಲಿರುವ ಒಳಚರಂಡಿ ವ್ಯವಸ್ಥೆ ಸುಮಾರು 40-50 ವರ್ಷಗಳ ಹಳೆಯದು.

ಜಲಮಂಡಳಿಯ ಒಳಚರಂಡಿಯ ವ್ಯವಸ್ಥೆಯು ಕೊಳಚೆ ನೀರನ್ನು ಮಾತ್ರ ಬಿಡಲು ವಿನ್ಯಾಸಗೊಳಿಸಲಾಗಿದೆ. ಆದರೆ ಹಲವಾರು ಪ್ರದೇಶಗಳಲ್ಲಿ ಮಳೆ ನೀರು ಹರಿದು ಹೋಗಲು ಸಾಕಷ್ಟು ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಇಂಥ ಪ್ರದೇಶಗಳಲ್ಲಿ ಮಳೆಯನೀರೂ ಸಹ ಒಳಚರಂಡಿ ಮ್ಯಾನ್ ಹೋಲ್‌ಗಳಲ್ಲಿ ಸೇರುವುದರಿಂದ ಕಸಕಡ್ಡಿಗಳು ಒಳಚರಂಡಿ ಕೊಳವೆಗಳಲ್ಲಿ ಸೇರಿ ಅವು ಕಟ್ಟಿಕೊಳ್ಳುತ್ತವೆ.

ಈ ಕಾರಣದಿಂದ ತಗ್ಗು ಪ್ರದೇಶಗಳಲ್ಲಿ ಆಗಾಗ್ಗೆ ಒಳಚರಂಡಿ ವ್ಯವಸ್ಥೆ ಕಟ್ಟಿಕೊಂಡು ಮ್ಯಾನ್‌ಹೋಲ್‌ಗಳಿಂದ ತುಂಬಿಹರಿಯುತ್ತದೆ. ಇಂಥ ಸಂದರ್ಭಗಳಲ್ಲಿ ಬೆಂಗಳೂರು ಜಲಮಂಡಲಿಯು ಕೂಡಲೇ ಕಟ್ಟಿಕೊಂಡಿರುವ ಕಸ ಕಡ್ಡಿ ಮತ್ತು ಇತರೆ ವಸ್ತುಗಳನ್ನು ತೆಗೆದು ಹಾಕಿ ಸರಾಗವಾಗಿ ಒಳಚರಂಡಿ ನೀರು ಹರಿಯಲು ಅನುಕೂಲ ಮಾಡಲಾಗುತ್ತಿದೆ.

ಒಳಚರಂಡಿ ವ್ಯವಸ್ಥೆಯ ಪೈಪುಗಳ ಒಳಗೆ ಸೇರುವ ಕಸಕಡ್ಡಿ ತೆಗೆಯಲು ಜಲಮಂಡಲಿಯಲ್ಲಿ ಈಗಾಗಲೇ ಎರಡು ಜೆಟ್ಟಿಂಗ್ ಯಂತ್ರಗಳಿವೆ ಮತ್ತು ನಿರ್ಮಲೀಕರಣ ಕೆಲಸಗಾರರಿಂದಲೂ ಈ ರೀತಿ ಕಟ್ಟಿಕೊಂಡ ಮ್ಯಾನ್ ಹೋಲ್ ಮತ್ತು ಕೊಳವೆಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಜಲಮಂಡಳಿಯು ಪ್ರತಿ ವರ್ಷವೂ ಒಳಚರಂಡಿ ದುರಸ್ತಿ ಕಾಮಗಾರಿಗಳನ್ನು ನಿರ್ವಹಿಸಲು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಇದಲ್ಲದೆ ಅಗತ್ಯವಿರುವಡೆಯಲ್ಲಿ ಸಣ್ಣ ವ್ಯಾಸದ ಕೊಳವೆಗಳನ್ನು ತೆಗೆದು ಈಗಿನ ಒಳಚರಂಡಿ ನೀರಿನ ಪ್ರಮಾಣಕ್ಕೆ ತಕ್ಕಂತೆ ಹೆಚ್ಚು ವ್ಯಾಸದ ಕೊಳವೆಗಳನ್ನು

ಅಳವಡಿಸಲಾಗುತ್ತಿದೆ. ಒಡೆದು ಹೋಗಿರುವ ಮ್ಯಾನ್ ಹೋಲ್ ಮುಚ್ಚಳಗಳನ್ನು ಆಗಿಂದಾಗ್ಗೆ ಬದಲಾಯಿಸಲಾಗುತ್ತಿದೆ. ಇದರಿಂದ ಮಳೆಯ ನೀರು ಮಂಡಳಿಯ ಒಳಚರಂಡಿ ಕೊಳವೆಗಳಲ್ಲಿ ಸೇರುವುದು ತಪ್ಪುತ್ತದೆ ಮತ್ತು ನಾಗರೀಕರಿಗೆ ಓಡಾಟಕ್ಕೆ ಆಗುವ ತೊಂದರೆಯೂ ಸಹ ನಿವಾರಣೆಯಾಗುತ್ತದೆ.

ಒಳಚರಂಡಿ ವ್ಯವಸ್ಥೆ ದುರಸ್ತಿ ಕಾರ್ಯಕ್ಕೆ ಈ ಕೆಳಗೆ ಸೂಚಿಸಿರುವಂತೆ ವಾರ್ಷಿಕವಾಗಿ ಹಣ ಖರ್ಚು ಮಾಡಲಾಗಿದೆ.

92-93ರಲ್ಲಿ	154.90 ಲಕ್ಷ ರೂಪಾಯಿಗಳು
93-94ರಲ್ಲಿ	176.86 ಲಕ್ಷ ರೂಪಾಯಿಗಳು
94-95ರಲ್ಲಿ	138.55 ಲಕ್ಷ ರೂಪಾಯಿಗಳು
95-96ರಲ್ಲಿ	150.00 ಲಕ್ಷ ರೂಪಾಯಿಗಳು

ಒಳಚರಂಡಿ ಶುಚಿಗೊಳಿಸಲು ಈಗ ಇರುವ ಎರಡು ಜೆಟ್ಟಿಂಗ್ ಯಂತ್ರಗಳ ಜೊತೆಗೆ ಮತ್ತೆ ನಾಲ್ಕು ಒಳಚರಂಡಿ ಜೆಟ್ಟಿಂಗ್ ಯಂತ್ರಗಳನ್ನು ತೆಗೆದುಕೊಳ್ಳಲು ಮಂಡಳಿಯು ಕ್ರಮ ಕೈಗೊಂಡಿದೆ. ಈ ಯಂತ್ರಗಳು 95:96ರ ಕೊನೆಗೆ ಬರುವ ನಿರೀಕ್ಷೆ ಇದೆ ಈ ಯಂತ್ರಗಳು ಬಂದ ನಂತರ ಒಳಚರಂಡಿ ಕಟ್ಟಿಕೊಳ್ಳುವ ದುರಸ್ತಿ ಕಾರ್ಯವನ್ನು ಮತ್ತಷ್ಟು ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

ಜಲಮಂಡಳಿಯು ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ವ್ಯಾಸದ ಒಳಚರಂಡಿ ಕೊಳವೆಗಳಿಂದ ಹೂಳೆತ್ತುವ ಕಾರ್ಯವನ್ನೂ ಕೈಗೊಂಡಿದೆ.

ಈ ದಿಸೆಯಲ್ಲಿ ಜಲಮಂಡಳಿಯು ಬೆಂಗಳೂರು ನಗರ ಪಾಲಿಕೆಯವರೊಡನೆ ಸಂಪರ್ಕಿಸಿ ಮಳೆ ನೀರನ್ನು ಒಳಚರಂಡಿ ಕೊಳವೆಗಳಿಗೆ ಬಿಡಬಾರದೆಂದು ವಿನಂತಿಸಿದೆ.

ಗಮನ ಸೆಳೆಯುವ ಸೂಚನೆಯಲ್ಲಿ ಹೇಳಿರುವ ನಾಗರೀಕರಿಗೆ ಉಂಟಾಗುವ ತೊಂದರೆಗಳನ್ನು ಸಾಕಷ್ಟು ನಿಯಂತ್ರಿಸಲು ಮೇಲೆ ಸೂಚಿಸಿರುವ ಕ್ರಮಗಳಿಂದ ಸಾಧ್ಯವಾಗುತ್ತದೆಂಬ ವಿಶ್ವಾಸ ಜಲಮಂಡಳಿಗೆ ಇದೆ.

ಶ್ರೀ ಎನ್.ರಾಜಣ್ಣ:- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಒಳಚರಂಡಿ ವ್ಯವಸ್ಥೆ ಏನು ಇದೆ ಸನ್ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸುಮಾರು 50 ವರ್ಷಗಳ ಹಿಂದೆ ಆಗಿದ್ದು. 1950ರಲ್ಲಿ ಬೆಂಗಳೂರು ನಗರದ ಜನ ಸಂಖ್ಯೆ 4 ಲಕ್ಷ ಇದ್ದಿದ್ದು ಈಗ 50 ಲಕ್ಷಕ್ಕೆ ದಾಟಿದೆ. ಅದರಲ್ಲಿ ಬೆಂಗಳೂರು ನಗರದ ಹಳೆಯ ಭಾಗದಲ್ಲಿ, ಚಿಕ್ಕಪೇಟೆ, ಬಳೇಪೇಟೆ, ಕಬ್ಬನ್‌ಪೇಟೆ, ಚಾಮರಾಜಪೇಟೆ, ಶಾಂತಿನಗರ, ಶ್ರೀರಾಮಪುರ, ಭಾರತೀನಗರ, ಕೆಲವು ದಂಡು ಪ್ರದೇಶಗಳಲ್ಲಿ ಈ ಒಳಚಂರಂಡಿ ವ್ಯವಸ್ಥೆ ಬಹಳಷ್ಟು ಹದಗೆಟ್ಟಿದೆ. ಯಾವ ಮಟ್ಟಕ್ಕೆ ಹದಗೆಟ್ಟಿಗೆ ಎಂದರೆ ಅದನ್ನು ಹೇಳುವುದಕ್ಕೇ ಆಗುವುದಿಲ್ಲ. ಆ ಮಟ್ಟಕ್ಕೇ ಕೆಟ್ಟು

ಹೋಗಿಬಿಟ್ಟಿದೆ. ಮಂತ್ರಿಗಳು ಹೇಳಿದರು ಪೈಪುಗಳನ್ನು ದೊಡ್ಡದು ಮಾಡಿದ್ದೇವೆ, ಕೆಲವು ಕಡೆ ಬದಲಾಯಿಸಿದ್ದೇವೆ ಎಂದು. ನಾನು ಮಂತ್ರಿಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ. 1961ರಲ್ಲಿ ಕಾವೇರಿ ಫಸ್ಟ್ ಸ್ಟೇಜ್ ಬಂದಾಗ 24 ಮಿಲಿಯನ್ ಗ್ಯಾಲನ್ಸ್ ನೀರು ಬೆಂಗಳೂರಿಗೆ ಬಂತು. ಈಗ ಬೆಂಗಳೂರಿಗೆ 240 ಎಂ.ಜಿ.ವಾಟರ್ ಬರುತ್ತಿದೆ. ಬ್ರಿಟೀಷ್‌ನವರು ಹಾಕಿದ್ದು ಆರರಿಂದ 9 ಇಂಚಿನ ಪೈಪು. ಇವತ್ತು 240 ಎಂಜಿ ನೀರು ಆ 9 ಇಂಚು ಪೈಪಿನಲ್ಲೇ ಹೋಗುವುದಕ್ಕೆ ಸಾಧ್ಯವೇ?

ಅಧ್ಯಕ್ಷರು:- ಇದು ಬ್ರಿಟಿಷರು ಇದ್ದಾಗ ಎಷ್ಟು ಇತ್ತು?

ಶ್ರೀ ಎನ್.ರಾಜಣ್ಣ:- ಸಾರ್ ಕೆಲವು ಕಡೆ ಬ್ರಿಟೀಷ್‌ನವರು ಹಾಕಿದ್ದುದನ್ನು ಛೇಂಜ್ ಮಾಡಿಲ್ಲ. ಅವರ ಕಾಲದಲ್ಲಿ ಕನ್ಸರ್‌ವೆನ್ಸಿ ಇದ್ದುದು 9 ಇಂಚು ಪೈಪು. ಬ್ರಿಟೀಷ್ ಸರ್ಕಾರದಲ್ಲಿ ಛೇಂಬರ್ಸ್ ಸ್ಕ್ವೇರ್ಸ್ 8 X 10 ಫೀಟ್ ಛೇಂಬರ್ಸ್ ಕಟ್ಟಿ ತಿಂಗಳಿಗೊಂದು ಸಾರಿ ಸೋಪ್ ಪೌಡರ್ ಹಾಕಿ ವಾಶ್ ಮಾಡುತ್ತಿದ್ದರು. ಅಷ್ಟು ಕ್ಲೀನಾಗಿ ಇಡುತ್ತಿದ್ದರು. During the British regime and even after the British regime.... ಬೋರಿಂಗ್ ಪೌಡರು ಹಾಕಿ ಒಂದು ತಿಂಗಳಿಗೆ ಒಂದು ಬಾರಿ ಕ್ಲೀನ್ ಮಾಡಿ ಅಷ್ಟು ಶುಚಿಯಾಗಿ ಇಡುತ್ತಿದ್ದರು ಮ್ಯಾನ್‌ಹೋಲ್ಸ್ ಎನ್ನುವುದನ್ನು. ಈಗ ಮ್ಯಾನ್‌ಹೋಲ್ಸ್ ಇಲ್ಲ. ಅಂಡರ್‌ಗ್ರೌಂಡ್ ಡ್ರೈನೇಜ್ ಇದೆ. ಅಂಡರ್‌ಗ್ರೌಂಡ್ ಡ್ರೈನೇಜ್ ಇದ್ದರೂ ಸಹ ಅದು ಅಪ್ಪರ್ ಡ್ರೈನೇಜ್ ಆಗಿ ಹೋಗಿಬಿಟ್ಟಿದೆ. ಅವೆಲ್ಲಾ ಬಯಲಿನಲ್ಲಿ ಹರಿಯುತ್ತದೆ. ಅಂಡರ್ ಗ್ರೌಂಡ್ ಡ್ರೈನೇಜ್ ತುಂಬಿ ಓಪನ್ ಡ್ರೈನೇಜ್ ಬರುತ್ತದೆ. ಮೇಲೆ ಹೋಗುವುದು. ಮೇಲೆ ಹೋಗುವುದರ ಜೊತೆಗೆ ಈ ಜನಸಂಖ್ಯೆ ಪ್ರಮಾಣ ಯಾವಾಗ ಜಾಸ್ತಿ ಆಗುತ್ತಿದೆ ಈ ಬೆಂಗಳೂರು ನಗರದಲ್ಲಿ ಬಹು ಮಹಡಿ ಕಟ್ಟಡಗಳು ಜಾಸ್ತಿ ಆಗುತ್ತಿವೆ. ಹಳೆಯ ಗ್ರಾಮ ಠಾಣ, ಒಂದು ಕುಟುಂಬ ಇದ್ದಂತಹ ಗ್ರಾಮಠಾಣ, ಒಂದು ಮನೆಯಲ್ಲಿ ಒಂದು ಕುಟುಂಬ ಇದ್ದಂತಹ ಕಾಲದಲ್ಲಿ....

ಅಧ್ಯಕ್ಷರು:- ರಾಜಣ್ಣನವರೇ, ಇದು ಗಮನ ಸೆಳೆಯುವ ಸೂಚನೆ

SRI N.RAJANNA:- I am coming to the point, Sir, please...

MR.SPEAKER:- Please don't stop him. He is coming to the point...

SRI N.RAJANNA:- I request the Hon'ble Minister to repeat.

MR.SPEAKER:- He wants you to speak in English. I am sure you would oblige..... ಪಾಟಾಳ್ ಅವರು ದಯಮಾಡಿ ಸಹಕರಿಸಿ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಎಂ.ಜಿ. ಅಂದರೆ ಏನು ಎಂದು ರಾಜಣ್ಣನವರು ಮಾತು ಗೊತ್ತಾಗಲಿಲ್ಲ ಸಾರ್.

ಶ್ರೀ ವಾಟಾಳ್ ನಾಗರಾಜ್:- ಯಾರ ಮಾತನ್ನೂ ಕೇಳಿ ಇಂಗ್ಲೀಷ್‌ನಲ್ಲಿ ಮಾತನಾಡಲು ಹೋಗಬೇಡಿ.

ಶ್ರೀ ಎನ್.ರಾಜಣ್ಣ:- ಕನ್ನಡ 9ನೇ ಕ್ಲಾಸ್‌ನವರೆಗೆ ಕಲಿಯಲಿಲ್ಲ. ಆಮೇಲೆ ಯಾರೋ ಅಷ್ಟು ಇಷ್ಟು ಇಂಗ್ಲೀಷ್ ಹೇಳಿಕೊಟ್ಟು ಎಸೆಸೆಲ್‌ಸಿನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡಿ ಕಳಿಸಿಕೊಟ್ಟರು.

MR.SPEAKER:- You can speak in English..

ಶ್ರೀ ಎನ್.ರಾಜಣ್ಣ:- ಎಂ.ಜಿ. ಅಂದರೆ ಮಿಲಿಯನ್ ಗ್ಯಾಲನ್ಸ್,

MR.SPEAKER:- Don't listen to Sagir Ahmed...

ಶ್ರೀ ಎನ್.ರಾಜಣ್ಣ:- ಈಗ ಅದೇನು ಆಗಿದೆ ಎಂದರೆ 240 ಎಂಜಿ ವಾಟರ್ ಬೆಂಗಳೂರಿಗೆ ಬರುತ್ತಿದೆ. ಕಾವೇರಿ ಫಸ್ಟ್ ಸ್ಟೇಜ್, ಕಾವೇರಿ ಸೆಕೆಂಟ್ ಸ್ಟೇಜ್, ಕಾವೇರಿ ಥರ್ಡ್ ಸ್ಟೇಜ್ ಬಂದಿದೆ. ಕಾವೇರಿ ನಾಲ್ಕನೇ ಸ್ಟೇಜ್ ಬರುತ್ತಿದೆ. ಆವಾಗ 1961ರಲ್ಲಿ ಕಾವೇರಿ ಫಸ್ಟ್ ಸ್ಟೇಜ್ ಬಂದಾಗ ಕೆಲವು ಕಡೆ ಎರಡು ಇಂಚು ಡಯಾಮೀಟರ್ ಪೈಪ್ಸ್ ಹಾಕಿದ್ದಾರೆ. ಮತ್ತು 9 ಇಂಚು ಡಯಾಮೀಟರ್‌ಪೈಪ್ಸೇ 22 ಇಂಚು ಚದರ ಮೀಟರ್ ಪೈಪಿಗೆ ಕನೆಕ್ಷನ್ ಕೊಡುತ್ತಾರೆ. ಆದರೆ ಈ ಗ್ರಾಮ ಠಾಣದ ಹಳೆಯ ಪಾಕೆಟ್, ಆಗ ಹೇಳಿದೆನಲ್ಲಾ ಭಾರತೀನಗರ ಶಾಂತಿನಗರ, ಶಿವಾಜಿನಗರ, ಚಾಮರಾಜಪೇಟೆ. ಹಳೆಯ ಟೌನ್ಸ್, ಹಳೆಯ ಗ್ರಾಮಠಾಣ ಎಲ್ಲಿದೆ ಅಲ್ಲಿ ಒಳಚರಂಡಿ ವ್ಯವಸ್ಥೆ ಬಹಳ ಹದಗೆಟ್ಟಿದೆ. ಯಾವ ಮಟ್ಟಕ್ಕೆ ಹದಗೆಟ್ಟಿದೆ ಎಂದರೆ ಅದರಲ್ಲೂ ಆ ಲೋಲೆವಲ್ ಏರಿಯಾದಲ್ಲಿ ನೂರಾರು ಮನೆಗಳಿಗೆ ಈ ಮೇಲೆ ಇರುವವರು ಬಿಟ್ಟು ಬಿಡುತ್ತಾರೆ. ಅಲ್ಲಿಯೂ ಅನ್ಯಾಯ ಆಗುತ್ತಿದೆ.

ಅಧ್ಯಕ್ಷರು:- ದಯವಿಟ್ಟು ನನ್ನ ಮಾತು ಕೇಳಿ, ರಾಜಣ್ಣನವರೆ, ಗಮನ ಸೆಳೆಯುವ ಸೂಚನೆ ಎಂದರೆ ನೀವು ಒಂದು ಸಬ್ಜೆಕ್ಟ್ ಮೆನ್‌ಷನ್ ಮಾಡಿಬಿಟ್ಟು ಇಂತಹ ಮಂತ್ರಿಗಳು ಈಕಡೆಗೆ ಗಮನ ಕೊಡಬೇಕು ಎಂದು ನೋಟೀಸ್ ಕೊಡುತ್ತೀರಿ. ಮಿನಿಸ್ಟರ್ ಆ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್ ಓದುತ್ತಾರೆ. ಸ್ಟೇಟ್‌ಮೆಂಟ್ ಓದಿದ ನಂತರ ತಮಗೆ ಆ ಕಾಪಿ ಕೊಡುತ್ತಾರೆ. ಆ ಕಾಪಿ ನೋಡಿಕೊಂಡು ಮಿನಿಸ್ಟರ್ ಹೇಳಿರತಕ್ಕ ಸ್ಟೇಟ್‌ಮೆಂಟಿನಲ್ಲಿ ಏನಾದರೂ ನ್ಯೂನತೆಗಳು ಇದ್ದರೆ ಅದನ್ನು ಎತ್ತಿ ಹಿಡಿದು ಈ ತರಹ ತಾವು ಹೇಳಿಕೆಯಲ್ಲಿ ಹೇಳಿದ್ದೀರಿ, ಇದು ಸರಿ ಇಲ್ಲ ಎಂದು ತಾವು ಹೇಳಬೇಕು. ಭಾಷಣ ಮಾಡುವುದಕ್ಕೆ ಮತ್ತೆ ಡಿಮ್ಯಾಂಡ್ಸ್ ಇದೆ, ಆಗ ನಿಮ್ಮನ್ನು ಕರೆಯುತ್ತೇನೆ. ಬೆಂಗಳೂರು ವಿಚಾರದಲ್ಲಿ ನಿಮ್ಮ ಭಾಷಣ ಕೇಳದೇ ನಾವು ಮುಂದಕ್ಕೆ ಹೋಗುವುದೇ ಇಲ್ಲ.

ಶ್ರೀ ಎನ್.ರಾಜಣ್ಣ:- ಅವರು ಹೇಳಿರುವುದು ಕನ್ನಡದಲ್ಲಿ, ನಾಲ್ಕನೆಯ ಪ್ಯಾರದಲ್ಲಿ ಹೇಳುತ್ತಾರೆ. 'ಇದಲ್ಲದೆ ಅಗತ್ಯ ಇರುವೆಡೆಯಲ್ಲಿ ಸಣ್ಣ ವ್ಯಾಸದ ಕೊಳವೆಗಳನ್ನು ತೆಗೆದು ಈಗಿನ ಒಳಚರಂಡಿ ನೀರಿನ ಪ್ರಮಾಣಕ್ಕೆ ತಕ್ಕಂತೆ ಹೆಚ್ಚು ವ್ಯಾಸದ ಕೊಳವೆಗಳನ್ನು ಅಳವಡಿಸಲಾಗುತ್ತಿದೆ' ಎಂದು ಹೇಳಿದ್ದಾರೆ. ಡಯಾಮೀಟರ್ ಫಿಕ್ಸೇಷನ್ ಮಾಡುತ್ತೇವೆಂದು ಈಗ ಹೇಳಿದ್ದಾರೆ. ಆದರೆ ನಾನು ಹೇಳುತ್ತಿರುವುದು ಬ್ರಿಟೀಷ್‌ರವರ ಕಾಲದಲ್ಲಿ ಇದ್ದಂತಹ 9 ಇಂಚು ಪೈಪೇ ಇದೆ. ಅವರ ಕಾಲದಲ್ಲಿ ಹಾಕಿ ಹೋಗಿರುವ ಕೆಲವು ಪಾಕೆಟ್‌ಗಳು ಇವೆ. ಆಗ ಜನಸಂಖ್ಯೆ 5 ಲಕ್ಷ ಇದ್ದುದು, 50 ಲಕ್ಷಕ್ಕೆ ಹೋಗಿದೆ. ಆದರೆ ಕಾವೇರಿ ಫಸ್ಟ್ ಸ್ಟೇಜ್, ಬಂದಾಯಿತು, ಸೆಕೆಂಡ್ ಥರ್ಡ್ ಬಂದಾಯಿತು. 240 ಎಂಜಿ ವಾಟರ್ ಬೆಂಗಳೂರು ಸಿಟಿಗೆ ಬರುತ್ತಾ ಇದೆ. ಕಾವೇರಿ ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್, ಥರ್ಡ್ ಸ್ಟೇಜ್ ವಾಟರ್‌ನಲ್ಲಿ ಎಷ್ಟು ವೇಸ್ಟ್ ಆಗಿ ಹೋಗುತ್ತದೆ ಆ ವೇಸ್ಟ್ ಹೋಗುವುದಕ್ಕೆ ಪೈಪು ಅಷ್ಟು ಡಯಾಮೀಟರ್ ಇನ್‌ಕ್ರೀಸ್ ಆಗಿಲ್ಲ ಎಂದು ನನ್ನ ವರ್ಷನ್. ನನ್ನ ವರ್ಷನ್ ಏನು ಎಂದರೆ ಡಯಾಮೀಟರ್ ಇನ್‌ಕ್ರೀಸ್ ಆಗಿಲ್ಲ. ಇದು ಯಾವಾಗ ಇನ್‌ಕ್ರೀಸ್ ಆಗಲಿಲ್ಲ ಎಂದರೆ ಅದಕ್ಕೋಸ್ಕರ ಕೆಲವು ಕಡೆ ಪೈಪು ದೊಡ್ಡದು ಹಾಕಬೇಕು. ಅದು ಹಾಕದೇ ಇದ್ದರೆ ಲೋ ಲೆವೆಲ್ ಏರಿಯಾದಲ್ಲಿ ನೀರು ಮೇಲೆ ಹೋಗುತ್ತಿದೆ.

4.40 ಪಿ.ಎಂ.

ಅಲ್ಲಿ ಹಾಕಿರುವ ಪೈಪ್‌ನ ಡಯಾಮೀಟರ್ ದೊಡ್ಡದಾಗಿಲ್ಲ. ಈ ಕಾರಣದಿಂದ ಏನಾಗುತ್ತದೆಂದರೆ, ಜನಸಂಖ್ಯೆ ಒತ್ತಡದಿಂದ the whole underground system is blocking. ಮಳೆಗಾಲದಲ್ಲಿ, ಇನ್ನಿತರ ಕಾಲಗಳಲ್ಲಿ ಅಂಡರ್‌ಗ್ರೌಂಡ್‌ನಲ್ಲಿ ನೀರು ಬ್ಲಾಕ್ ಆಗುತ್ತಿದೆ, ಇದರ ಪರಿಣಾಮ ನೀರು ಮುಂದೆ ಹೋಗದೆ ಶೌಚಾಲಯದಿಂದ ಅಡುಗೆ ಮನೆಗೆ ಬರುತ್ತದೆ. ಸ್ವಲ್ಪ ದಯವಿಟ್ಟು ಕೇಳಿ. ಈ ಸಮಸ್ಯೆ ಬಡ ಮತ್ತು ಮಧ್ಯಮ ವರ್ಗದವರ ಮನೆಗಳಲ್ಲಿ ಜಾಸ್ತಿಯಾಗಿದೆ, ಬೇರೆ ಕಡೆಗಳಲ್ಲಿರುವ ಬಡಾವಣೆಗಳಲ್ಲಿ ಈ ರೀತಿಯ ಸಮಸ್ಯೆಯುಂಟಾಗುವುದಿಲ್ಲ. ಇದಾಗುವುದೇ ಗ್ರಾಮಠಾಣಾ, ಬಡವರು ಮತ್ತು ಮಧ್ಯಮ ವರ್ಗದವರು ವಾಸಿರುವ ಮತ್ತು ಕಾಂಪ್ಲೆಕ್ಸ್ ಸಿಟಿ ಎಲ್ಲಿದೆಯೋ ಅಲ್ಲಿ ಮಾತ್ರ.

ಶ್ರೀ ಅನಂತನಾಗ್:- ಅಧ್ಯಕ್ಷರೆ, ಮಾನ್ಯ ಸದಸ್ಯರು ನಗರಸಭೆಯ ಸದಸ್ಯರಾಗಿ ಹಿಂದೆ ಸೇವೆ ಸಲ್ಲಿಸಿರುವುದರಿಂದ, ಈ ಕುರಿತು ಹೇಳುವುದಾದರೆ, ಈ ದಿಸೆಯಲ್ಲಿ ಬೆಂಗಳೂರು ಜಲ ಮಂಡಳಿ ಬೆಂಗಳೂರು ಮಹಾನಗರಪಾಲೀಕೆಯೊಡನೆ ಸಂಪರ್ಕಿಸಿ ಮಳೆ ನೀರನ್ನು ಒಳಚರಂಡಿ ಕಾಲುವೆಗೆ ಬಿಡಬಾರದೆಂದು ವಿನಂತಿಸಿಕೊಂಡಿದೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ರಾಜಣ್ಣನವರಿಗೆ ಅಧ್ಯಕ್ಷರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅದನ್ನು ತಾವು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ಇದು ಗಮನ ಸೆಳೆಯುವ ಸೂಚನೆಯಾಗಿರುವುದರಿಂದ ನಿಯಮವನ್ನು ಅನುಸರಿಸಬೇಕು.

ನಿಯಮವನ್ನು ಪಾಲಿಸಬೇಕೆಂದು ಅಧ್ಯಕ್ಷರು ತಮಗೆ ಸೂಚಿಸಿದ್ದಾರೆ.

ಶ್ರೀ ಎನ್.ರಾಜಣ್ಣ:- ಈ ಅಂಡರ್‌ಗ್ರೌಂಡ್ ಡ್ರೈನೇಜ್ ಎಲ್ಲಾ ತುಂಬಿಹೋಗುತ್ತದೆ.

ಅಧ್ಯಕ್ಷರು:- ಬೈರೇಗೌಡರೇ, ತಮ್ಮ ಸಲಹೆಯೆಲ್ಲಾ ಅಂಡರ್‌ಗ್ರೌಂಡ್ ಡ್ರೈನೇಜ್‌ನಲ್ಲಿ ಹೊರಟುಹೋಯಿತು.

ಶ್ರೀ ವಿ.ಸೋಮಣ್ಣ:- ಸನ್ಮಾನ್ಯ ಅಧ್ಯಕ್ಷರೆ, ಸದಸ್ಯರುಗಳಾದ ರಾಜಣ್ಣ, ಸುರೇಶ್‌ಕುಮಾರ್, ಕೃಷ್ಣಪ್ಪ ಮತ್ತು ಮುನಿಯಪ್ಪ ಮತ್ತು ನಾನು ನಗರಸಭೆಯಲ್ಲಿ ಕಾರ್ಪೊರೇಟರ್‌ಗಳಾಗಿ ಕೆಲಸ ಮಾಡಿದಂತಹವರು. ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳುತ್ತಿರುವ ವಿಧಾನ ಸರಿಯಿಲ್ಲ ಅಷ್ಟೆ. ಹಿಂದಿನ ಕಾಲದಲ್ಲಿ ಅಳವಡಿಸಲಾಗಿದ್ದಂಥ ಪೈಪುಗಳೇನಿವೆ, ಅವು ಈಗ ಹಳೆಯದಾಗಿದ್ದು, ರಸ್ಟ್ ಹಿಡಿದಿದೆ, ಅದರಲ್ಲಿ ನೀರು ಹೋಗುವ ಸಾಮರ್ಥ್ಯ ಕಡಿಮೆಯಾಗಿದೆ. ಆದುದರಿಂದ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಶಿವಾಜಿನಗರ ಮತ್ತು ನನ್ನ ಕ್ಷೇತ್ರ ಒಳಗೊಂಡಂತೆ ಕೆಲವು ವಿಭಾಗಗಳಲ್ಲಿ ಈಗಾಗಲೇ ಹಂತ ಹಂತವಾಗಿ ಹಳೆಯ ಪೈಪುಗಳನ್ನು ಬದಲಾಯಿಸುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಬರೀ ಅವೆರಡು ಕ್ಷೇತ್ರಗಳಲ್ಲಿ ಮಾತ್ರ ಆ ರೀತಿ ಆಗುತ್ತಿದೆಯೇ? ಬೇರೆ ಕ್ಷೇತ್ರಗಳಲ್ಲಿ ಆಗುತ್ತಿಲ್ಲವೇ?

ಶ್ರೀ ವಿ.ಸೋಮಣ್ಣ:- ಒಂದು ನಿಮಿಷ ತಾಳಿ. ಹಳೆಯ ಊರು, ಗ್ರಾಮಠಾಣಗಳು ಯಾವುದಿತ್ತೋ, ಅಲ್ಲೆಲ್ಲಾ ಹಿಂದೆ 2-3-4 ಇಂಚಿನ ಪೈಪುಗಳನ್ನು ಅಳವಡಿಸಲಾಗಿದ್ದು ಇವೊತ್ತು ಆ ಪೈಪುಗಳನ್ನು ಸಾಮರ್ಥ್ಯ ಜಾಸ್ತಿಯಿಲ್ಲದಿರುವುದರಿಂದ ಓವರ್ ಫ್ಲೋ ಆಗುತ್ತಿದ್ದು ತೊಂದರೆಯಾಗುತ್ತಿರುವ ವಿಷಯವನ್ನು ಮಾನ್ಯ ಸದಸ್ಯರಾದ ರಾಜಣ್ಣನವರು ಗಮನಕ್ಕೆ ತರುತ್ತಿದ್ದಾರೆ. ಎರಡನೆಯದಾಗಿ, ಬೆಂಗಳೂರು ನಗರ ಇಷ್ಟೊಂದು ಬೆಳೆಯುತ್ತದೆಂದು ನಾವ್ಯಾರೂ ಕೂಡ ಯೋಚನೆ ಮಾಡಿದಂಥವರಲ್ಲ. ಆದುದರಿಂದ, ಇವೊತ್ತು ಈ ಪರಿಸ್ಥಿತಿ ಆಗುತ್ತಿರುವುದರಿಂದ ಜಲಮಂಡಳಿಯವರು ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದಾಗಿ ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಹೇಳಿದ್ದಾರೆ. ತಮ್ಮ ಮೂಲಕ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುದೇನೆಂದರೆ, ಇದನ್ನು ಮ್ಯಾಸಿವ್ ಆಗಿ ತೆಗೆದುಕೊಂಡು 20-30-40 ವರ್ಷಗಳ ಹಿಂದೆ ಅಳವಡಿಸಿದ್ದಂಥ ಹಳೆಯ ಪೈಪುಗಳನ್ನು ಬದಲಾವಣೆ ಮಾಡುವ ಕೆಲಸ ಒಂದೆಡೆಯಾದರೆ, ಮತ್ತೊಂದೆಡೆ ಸ್ಯಾನಿಟೇಶನ್‌ನಲ್ಲಿ ಏನು ತೊಂದರೆಯಾಗಿದೆ, ಇದರ ಬಗ್ಗೆ ಮಾಸ್ಟರ್ ಪ್ಲಾನ್ ಮಾಡಿರುವುದರಿಂದ, ಇದನ್ನು ಕೈಗೆತ್ತಿಕೊಂಡರೆ ಸಮಸ್ಯೆ ಬಗೆಹರಿಯಬಹುದೆಂದು ನನ್ನ ಭಾವನೆ.

ಶ್ರೀ ಎನ್.ರಾಜಣ್ಣ:- ಮಾನ್ಯ ಸಚಿವರಾದ ಸೋಮಣ್ಣನವರು ಹೇಳಿದ್ದುದು ನೂರಕ್ಕೆ ನೂರರಷ್ಟು ಸತ್ಯಾಂಶವಿದೆ. ನಾನು ಹೇಳುತ್ತಿರುವುದು ಕೂಡ ಅದನ್ನೇ.

ಅಧ್ಯಕ್ಷರು:- ಈಗ ಸೋಮಣ್ಣನವರು ಹೇಳಿದ್ದನ್ನು ಕೇಳಿದ್ದೇವೆ, ನೀವು ಹೇಳಿದ್ದನ್ನು ಕೂಡ ಕೇಳಿದ್ದೇವೆ, ಈಗ ಬೆಂಗಳೂರು ನಗರಾಭಿವೃದ್ಧಿ ಸಚಿವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಅನಂತನಾಗ್:- ಈಗಾಗಲೇ ಹೇಳಿರುವಂತೆ ಜಲ ಮಂಡಳಿ ಅನೇಕ ಕಡೆಗಳಲ್ಲಿ ಈ ಕುರಿತ ಕೆಲಸಗಳನ್ನು ಕೈಗೆತ್ತಿಕೊಂಡಿದ್ದು, ಹಾಗೆಯೇ 'ಬೃಹತ್ ನಗರ' ಯೋಜನೆಯಡಿ ಬೆಂಗಳೂರು ನಗರದಲ್ಲಿ ಡಯಾಮೀಟರ್‌ನಲ್ಲಿ ಡಬಲ್ ಡೈಮೆನ್‌ಶನ್ ಇರುವ ಪೈಪುಗಳನ್ನು ಅಳವಡಿಸುವ ಯೋಜನೆ ಕೂಡ ಹಮ್ಮಿಕೊಳ್ಳಲಾಗಿದೆ. ಆದಷ್ಟು ಶೀಘ್ರವಾಗಿ ಈ ಕೆಲಸಗಳನ್ನು ಕೈಗತ್ತಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಬೃಹತ್ ನಗರ ಯೋಜನೆ ಜಾರಿಗೆ ತರುವುದು ಯಾವಾಗ? ಮಾನ್ಯ ಸದಸ್ಯರಾದ ರಾಜಣ್ಣನವರು ಕೇಳಿರುವ ಅಂಡರ್‌ಗ್ರೌಂಡ್ ಸಿಸ್ಟಮ್ ಮಾಡುವುದು ಯಾವಾಗ? ಬೃಹತ್ ನಗರ ಯೋಜನೆ ಬರುವುದು ಎಷ್ಟನೇ ವರ್ಷಕ್ಕೆ? ಯೋಜನೆ ಜಾರಿಗೊಳಿಸಲು ನಿಮ್ಮಲ್ಲಿ ಹಣವೆಲ್ಲಿದೆ? ಏನು ವ್ಯವಸ್ಥೆ ಮಾಡಲಾಗಿದೆ? ಎಂಬುದನ್ನಾದರೂ ಹೇಳಿ.

ಶ್ರೀ ಅನಂತನಾಗ್:- ಬೆಂಗಳೂರಿನಲ್ಲಿ ಎಲ್ಲೆಲ್ಲಿ ಕೊಳಚೆ ಪ್ರದೇಶಗಳಿವೆಯೋ, ಬೃಹತ ನಗರ ಯೋಜನೆಯಡಿ ಸ್ಲಮ್ ರಿಮೂವಲ್ ಕಾಂಪೊನೆಂಟ್ ಎಂದು ಇದೆ. ಇದರ ರೂಪು ರೇಷೆ ತುಂಬಾ ವಿಸ್ತಾರವಾಗಿರುವುದರಿಂದ ಇದರ ಬಗ್ಗೆ ಇನ್ನೊಂದು ಸಂದರ್ಭದಲ್ಲಿ ಎಲ್ಲವನ್ನೂ ಸವಿಸ್ತಾರವಾಗಿ ಸದನಕ್ಕೆ ತಿಳಿಸುತ್ತೇನೆ.

+ಶ್ರೀ ಪಿ.ಹೆಚ್.ಪ್ರಕಾಶ್ (ಚಿಕ್ಕಪೇಟೆ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಣ್ಣನವರು ಮಾತನಾಡುತ್ತಾ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲದಿರುವುದರಿಂದ, ಮಳೆ ಬಂದಾಗ ಮಳೆ ನೀರಿನ ಜೊತೆ ಕಸಕಡ್ಡಿಗಳು ಸೇರಿ ಹರಿದು ಮ್ಯಾನ್‌ಹೋಲ್‌ಗಳನ್ನು ಸೇರುವುದರಿಂದ ಒಳಚರಂಡಿ ಕಾಲುವೆ ಕಟ್ಟಿಕೊಳ್ಳುತ್ತದೆ. ಅಲ್ಲದೆ, ತಗ್ಗು ಪ್ರದೇಶಗಳಲ್ಲಿ ಒಳಚರಂಡಿ ಯಾವಾಗಲೂ ಕಟ್ಟಿಕೊಂಡು, ಮ್ಯಾನ್‌ಹೋಲ್‌ಗಳು ಸಹ ತುಂಬಿರುತ್ತದೆಂದು ಹೇಳುತ್ತಿದ್ದಾರೆ. ಈ ರೀತಿ ನೂರಕ್ಕೆ ಶೇಕಡ ಹತ್ತರಷ್ಟಿರಬಹುದು. ಆದರೆ, ನೂರಕ್ಕೆ ಶೇಕಡ 90ರಷ್ಟು ಭಾಗ ಈ ರೀತಿಯ ಪರಿಸ್ಥಿತಿ ನನ್ನ ಕ್ಷೇತ್ರವಾದ ಚಿಕ್ಕಪೇಟೆಯಲ್ಲಿದೆ. ನಾನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹಿಂದೆ ನಗರಪಾಲಿಕೆ ಸದಸ್ಯನಾಗಿದ್ದೆ, ವಿ.ಮುನಿಯಪ್ಪನವರೂ ಸಹ ನಗರಪಾಲಿಕೆ ಸದಸ್ಯರಾಗಿದ್ದರು. ಅಲ್ಲದೆ, ಪ್ರಸ್ತುತ ಈ ಸದನದ ಸದಸ್ಯರಾಗಿರುವ ಶ್ರೀ ವಾಟಾಳ್ ನಾಗರಾಜ್‌ರವರು ಹಿಂದೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಸದಸ್ಯರಾಗಿದ್ದರು. ಅವರ ಕಾಲದಲ್ಲಿದ್ದಂಥ ಜನರು ಈಗಿಲ್ಲ. ಮಳೆಗಾಲದಲ್ಲಿ ಒಳಚರಂಡಿ ಕಟ್ಟಿಕೊಳ್ಳುವುದು ಸಹಜ. ಆದರೆ, ಬೇಸಿಗೆ ಕಾಲದಲ್ಲೂ ಕೂಡ ಒಳಚರಂಡಿ ವ್ಯವಸ್ಥೆ ಕಟ್ಟಿಕೊಳ್ಳುತ್ತಿದೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಳಚರಂಡಿಗೆಂದು ಹಿಂದೆ ಏಳು ಮತ್ತು ಹದಿನೆಂಟು ಇಂಚುಗಳ ಪೈಪುಗಳನ್ನು ಅಳವಡಿಸಿದ್ದು, ಪಕ್ಕದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ

ಬೆಳಿಗ್ಗೆ ನಾಲ್ಕು ಗಂಟೆಯಿಂದ ರಾತ್ರಿ ಎಂಟು ಗಂಟೆಗಳವರೆಗೆ ಸುಮಾರು ಒಂದೂವರೆ ಸಾವಿರದಷ್ಟು ಸಂಖ್ಯೆ ಪ್ರಯಾಣಿಕರು ಶೌಚಾಲಯಗಳನ್ನು ಉಪಯೋಗಿಸುವುದರಿಂದ, ಆ ನೀರು ನಮ್ಮ ಕ್ಷೇತ್ರದಲ್ಲಿ ಅಳವಡಿಸಿರುವ ಒಳಚರಂಡಿ ವ್ಯವಸ್ಥೆಯ ಮೂಲಕವೇ ಹರಿದುಬರುತ್ತದೆ. ಇಷ್ಟೇ ಅಲ್ಲದೆ, ಮೆಜೆಸ್ಟಿಕ್ ಪ್ರದೇಶದಲ್ಲಿ ಒಟ್ಟು 21 ಸಿನಿಮಾ ಥಿಯೇಟರ್‌ಗಳು, 210 ಹೋಟೆಲ್‌ಗಳು, 50 ವಸತಿ ಗೃಹಗಳು ಮತ್ತು 35 ಶಾಲೆಗಳಿದ್ದು, ಇಷ್ಟೂ ಕಡೆಗಳಿಂದ ಬರುವ ಶೌಚ ನೀರು ಒಳಚರಂಡಿ ಮಾರ್ಗವಾಗಿಯೇ ಹರಿದುಹೋಗಬೇಕಾಗಿರುವುದರಿಂದ ಮುಖ್ಯ ರಸ್ತೆಗಳಲ್ಲಿ ಹದಿನೇಳು ಇಂಚಿನ ಪೈಪುಗಳನ್ನು ಹಾಕಿರುವುದರಿಂದ ಜಾಸ್ತಿ ಒಳಚರಂಡಿ ನೀರು ಹೋಗುವುದಕ್ಕೆ ಸಾಮರ್ಥ್ಯವಿಲ್ಲದಿರುವುದರಿಂದ ಬೆಳಿಗ್ಗೆ ಏಳು ಗಂಟೆಯಿಂದ ಹತ್ತು ಗಂಟೆಗಳವರೆಗಿನ ಸಮಯದಲ್ಲಿ ಆ ನೀರು ಮ್ಯಾನ್‌ಹೋಲ್‌ಗಳ ಮೂಲಕ ಉಕ್ಕಿ ಹರಿದು ಕಾರ್ಪೊರೇಷನ್ ಡ್ರೈನೇಜ್‌ನಲ್ಲಿ ಹರಿದುಕೊಂಡು ಹೋಗುತ್ತಿರುತ್ತದೆ. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲದಿರುವುದರಿಂದ ಈ ಅವ್ಯವಸ್ಥೆಯನ್ನು ತಡೆಗಟ್ಟುವುದಕ್ಕೆ ನಾನು ಆ ಕ್ಷೇತ್ರದ ಒಬ್ಬ ಶಾಸಕನಾಗಿ ಒಳಚರಂಡಿ ವ್ಯವಸ್ಥೆ ಸರಿಪಡಿಸುವ ಬಗ್ಗೆ ಜಲಮಂಡಳಿ ಕಛೇರಿಗೆ ಹೋಗಿ ಕೇಳಿಕೊಳ್ಳಬೇಕಾಗಿದೆ. ಆ ಜಲಮಂಡಳಿ ಕಛೇರಿಯಲ್ಲಿ ಏನು ಅವ್ಯವಸ್ಥೆಯಾಗಿದೆ ಎಂದರೆ, ಹಿಂದೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರತ್ಯೇಕವಾಗಿದ್ದವು. ಈಗ ಅವೆರಡನ್ನೂ ಒಟ್ಟುಗೂಡಿಸಿ ಒಂದೇ ಮಂಡಳಿ ಮಾಡಿರುವುದರಿಂದ ಅಲ್ಲಿ ಕಾಯಂ ನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಇರುವುದರಿಂದ ನೀರು ಸರಬರಾಜು ಮಾಡಲು ಅವರನ್ನೇ ಹೋಗಿ ಕೇಳಬೇಕು ಮತ್ತು ಒಳಚರಂಡಿ ವ್ಯವಸ್ಥೆ ಸರಿಪಡಿಸುವುದಕ್ಕೂ ಕೂಡ ಅವರನ್ನೇ ಕೇಳಬೇಕು. ನಮ್ಮ ಕ್ಷೇತ್ರದಲ್ಲಿ ಈ ರೀತಿಯ ಅವ್ಯವಸ್ಥೆಯಾಗಿದೆಯೆಂದು ಅವರಿಗೆ ಹೇಳಿದಾಗ ಅವರು ಏನು ಹೇಳುತ್ತಾರೆಂದರೆ, 'ನಮ್ಮಲ್ಲಿ ಕೇವಲ ಹನ್ನೆರಡು ಸಂಖ್ಯೆಯಷ್ಟು ಕಡಿಮೆ ಸಿಬ್ಬಂದಿಯಿರುವುದರಿಂದ ಈಗ ಒಳಚರಂಡಿ ವ್ಯವಸ್ಥೆ ಸರಿಪಡಿಸುವುದಕ್ಕಾಗುವುದಿಲ್ಲ, ಮೂರು ದಿವಸಗಳ ಕಾಲ ಬಿಟ್ಟು ಬನ್ನಿ' ಎನ್ನುತ್ತಾರೆ. ಚಿಕ್ಕಲಾಲ್‌ಬಾಗ್ ವಿಭಾಗದಲ್ಲಿ ಕಡಿಮೆ ಸಂಖ್ಯೆ ಸಿಬ್ಬಂದಿಗಳಿರುವುದರಿಂದ ಪ್ರತಿ ದಿನ ಒಳಚರಂಡಿ ವ್ಯವಸ್ಥೆ ಸರಿಪಡಿಸಬೇಕಾದರೆ ಮೂವತ್ತು ಸಿಬ್ಬಂದಿಗಳ ಅವಶ್ಯಕತೆ ಇದೆ. ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಸುಮಾರು ಹತ್ತು-ಹದಿನೈದು ವರ್ಷಗಳಷ್ಟು ಹಿಂದೆ ಜನರು ಸಗಣಿ ತಟ್ಟಿ ಬೆರಣಿ ಮಾಡಿಕೊಂಡು ಒಲೆ ಉರಿಸುತ್ತಿದ್ದರು. ಆದರೆ, ಈಗ ಎ.ಇ.ಎಚ್, ಗ್ಯಾಸ್, ಸೀಮೆಎಣ್ಣೆ ಸೌಲಭ್ಯಗಳು ಧಾರಾಳವಾಗಿ ಸಿಗುವುದರಿಂದ ಯಾರೂ ಕೂಡ ಈಗ ಬೆರಣಿಯನ್ನು ಉಪಯೋಗಿಸುವುದಿಲ್ಲ. ಅಲ್ಲದೆ, ಹಸುಗಳನ್ನು ಸಾಕಿರುವವರು ಸಗಣಿಯನ್ನು ಬೇರೆಡೆಗೆ ಸಾಗಿಸದೆ ಅದನ್ನೂ ಒಳಚರಂಡಿ ವ್ಯವಸ್ಥೆಯ ಮೂಲಕವೇ ಬಿಡುತ್ತಿರುವುದರಿಂದ ಒಳಚರಂಡಿ ಯಾವಾಗಲೂ ತುಂಬಿ ತುಳುಕಾಡುತ್ತಿರುತ್ತದೆ. ಮಳೆಗಾಲದಲ್ಲಿ ಒಳಚರಂಡಿ ತುಂಬಿಕೊಳ್ಳುವುದು ಸಹಜ, ಒಪ್ಪಿಕೊಳ್ಳುತ್ತೇನೆ. ಆದರೆ, ಬೇಸಿಗೆ ಕಾಲದಲ್ಲೂ ಬೆಳಿಗ್ಗೆ

ಆರು ಗಂಟೆಯಿಂದ ಒಂಬತ್ತು-ಹತ್ತು ಗಂಟೆಯವರೆಗೆ ಒಳಚರಂಡಿ ಉಕ್ಕಿ ಹರಿಯುತ್ತಿರುತ್ತದೆ. ಒಳಚರಂಡಿ ಮಂಡಳಿಯವರು ಏನು ಮಾಡುತ್ತಾರೆಂದರೆ, ಕಾರ್ಪೊರೇಷನ್ ಡ್ರೈವ್ ಅನ್ನು ತೂತು ಮಾಡಿ ಒಳಚರಂಡಿ ನೀರನ್ನು ಅದರೊಳಗೆ ಬಿಡುತ್ತಾರೆ. ಈ ರೀತಿ ಬಿಟ್ಟಾಗ ಕಾರ್ಪೊರೇಷನ್ ಡ್ರೈವ್ ಪೂರ್ತಿ ಹಾಳಾಗಿ ಹೋಗುತ್ತದೆ. ಬೇಸಿಗೆ ಕಾಲದಲ್ಲಿ ಈ ರೀತಿಯ ಅವ್ಯವಸ್ಥೆಯಾಗುತ್ತಿರುವುದಕ್ಕೆ ಮಂತ್ರಿಗಳು ಉತ್ತರ ಕೊಡಬೇಕು. ಹಿಂದೆ ಇದೇ ಸದನದಲ್ಲಿ ಆಗ ಸಚಿವರಾಗಿದ್ದ ಶ್ರೀ ಟಿ.ಎನ್.ನರಸಿಂಹಮೂರ್ತಿಯವರು ಮಾತನಾಡುತ್ತಾ 'ಐವತ್ತು-ಅರವತ್ತು ವರ್ಷಗಳ ಹಿಂದೆ ಅಳವಡಿಸಿರತಕ್ಕ ಒಳಚರಂಡಿ ಪೈಪುಗಳೇನಿವೆ, ಅವುಗಳನ್ನು ಬದಲಾಯಿಸಲಾಗುತ್ತದೆ' ಎಂದು ಉತ್ತರ ಕೊಟ್ಟಿದ್ದರು. ಆದರೆ, ಇದುವರೆವಿಗೂ ಆ ಕುರಿತು ಏನೂ ಕ್ರಮ ಕೈಗೊಂಡಿಲ್ಲ.

ಶ್ರೀ ಎನ್.ರಾಜಣ್ಣ:- ಮಾನ್ಯ ಅಧ್ಯಕ್ಷರೆ, ಕನ್‌ಜೆಸ್ಟ್‌ಡ್ ಏರಿಯಾದಲ್ಲಿ ನೀರು ಹೋಗುವುದಿಲ್ಲ. ನೀರು ದುರ್ವಾಸನೆ ಬಂದು ಮಕ್ಕಳ ಲಂಗ್ಸ್‌ಗೆ ಎಫೆಕ್ಟ್ ಆಗುತ್ತಿದೆ. ಆ ದೊಡ್ಡ ಸಮಸ್ಯೆಯನ್ನು ಬಹಳ ಸುಲಭವಾಗಿ ಪರಿಗಣಿಸಿದ್ದಾರೆ. Drainage system has collapsed.

MR.SPEAKER:- We solve that problem.

ಶ್ರೀ ಎನ್.ರಾಜಣ್ಣ:- ಅಧ್ಯಕ್ಷರೇ, ಅಲ್ಲಿನ ಜನರ ದೂರುಗಳಿಗೆ ನಾನು ಉತ್ತರವನ್ನು ಕೊಡಲು ಆಗುತ್ತಿಲ್ಲ. ದೂರುಗಳು ಕೊಡುತ್ತಿರುವ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಒಬ್ಬರು ನನಗೆ ಏನೆಂದು ಪತ್ರ ಬರೆಯುತ್ತಾರೆಂದರೆ, ನಮಗೆ ಇಲ್ಲಿ ವಾಸಮಾಡಲು ಆಗುವುದಿಲ್ಲವೆಂದು ನನಗೆ ಬಂದು ಚೀಮಾರಿ ಹಾಕುತ್ತಾರೆ.

ಅಧ್ಯಕ್ಷರು:- ತಮಗೆ ಪಾರ್ಟಿವರ್ಕ್ ಇದೆಯೆಂದು ಹೇಳಿದ್ದಿರಲ್ಲ ಈಗ ಐದು ಗಂಟೆಯಾಗುತ್ತಿದೆ, ಹೋಗುವುದಿಲ್ಲವೇ?

SRI N.RAJANNA:- We want to live in the city. We want to have good air and not polluted air.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಹೇಳಿರುವ ವಿಚಾರಗಳಲ್ಲಿ ಬಹಳಷ್ಟು ಸತ್ಯಾಂಶವಿದೆ. ಅದು ಕೇವಲ ಚಿಕ್ಕಪೇಟೆಗೆ ಮಾತ್ರ ಸೀಮಿತವಾಗಿಲ್ಲ. ಚಾಮರಾಜಪೇಟೆಯಾಗಲಿ, ಶಾಂತಿನಗರವಾಗಲಿ, ಶಿವಾಜಿ ನಗರವಾಗಲಿ ಪ್ರತಿಯೊಂದು ಭಾಗದಲ್ಲೂ ಆ ಸಮಸ್ಯೆ ಇದೆ. ಈ ಸಮಸ್ಯೆಯ ನಿವಾರಣೆಗೆ ಆದಷ್ಟು ತುರ್ತಾಗಿ ಕ್ರಮತೆಗೆದುಕೊಳ್ಳಬೇಕಾಗಿದೆ, ಅದಕ್ಕೆ ನಾನು ಚಾಲನೆಕೊಡುತ್ತೇನೆ ಎಂದು ತಮಗೆ ತಿಳಿಸಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಯಾವುದೇ

ಸಮಸ್ಯೆಯ ಬಗ್ಗೆ ಕೇಳಿದರೆ ಅದನ್ನು ಮೆಗಾಸಿಟಿ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳತಕ್ಕದ್ದು ಮಂತ್ರವಾಗಿಬಿಟ್ಟಿದೆ. ನಾವೇನೇ ಕೇಳಿದರು ಮೆಗಾಸಿಟಿ ಎನ್ನತಕ್ಕ ಹೊಸ ಬೊಂಬೆ, ಮಗುವನ್ನು ಕೊಟ್ಟಂತಾಗಿದೆ. ಟ್ರಾಫಿಕ್ ಕೇಳಿ, ಹಂಪಿಂಗ್ ಯಾರ್ಡ್ ಕೇಳಿ ಮೆಗಾಸಿಟಿ ಯೋಜನೆಯಲ್ಲಿ ಮಾಡುವುದಾಗಿ ಹೇಳುತ್ತಾರೆ. ಬೆಂಗಳೂರಿನಲ್ಲಿ ಒಳಚರಂಡಿ ನೀರಿನ ಸಮಸ್ಯೆಯೊಂದಿದ್ದರೆ ಸ್ಟಾರ್ಮ್ ವಾಟರ್ ಡ್ರೈನಿನ ಸಮಸ್ಯೆಯೊಂದಿದೆ. ಯಾವ ನೀರು ಎಲ್ಲಿಗೆ ಹೋಗಬೇಕು ಎಂಬುದನ್ನು ನೋಡಿಕೊಳ್ಳುವಂಥ ನಗರಪಾಲಿಕೆಗಳಿರಬಹುದು, ವಾಟರ್ ಸಪ್ಲೈನವರಿರಬಹುದು ಆ ಕೆಲಸವನ್ನು ಮಾಡುತ್ತಿಲ್ಲ. ತಾವು ಉತ್ತರದಲ್ಲಿ ಮಳೆಯನೀರು ಸಹ ಒಳಚರಂಡಿ ಮ್ಯಾನ್‌ಹೋಲ್‌ಗಳಲ್ಲಿ ಸೇರುವುದರಿಂದ ಕಸಕಡ್ಡಿಗಳು ಒಳಚರಂಡಿ ಕೊಳವೆಗಳಲ್ಲಿ ಸೇರಿಕೊಂಡು ಅದು ಕಟ್ಟಿಕೊಳ್ಳುತ್ತವೆಂದು ಹೇಳಿದ್ದೀರಿ. ಆದರೆ ಒಳಚರಂಡಿ ನೀರು ಸ್ಟಾರ್ಮ್ ವಾಟರ್ ಡ್ರೈನ್ ಒಳಗೆ ಹೋಗುವುದನ್ನು ತಡೆಯಲು ಇದುವರೆಗೆ ಏನೂ ಪ್ರಯತ್ನ ಮಾಡಿಲ್ಲ. ನಲ್ಲಿಯಲ್ಲಿ ನೀರು ಬರುವುದಕ್ಕಿಂತ ಒಳಚರಂಡಿ ನೀರು ಹೊರಗಡೆ ಹರಿದುಹೋಗುವುದೇ ಜಾಸ್ತಿಯಾಗಿದೆ. ಆದ್ದರಿಂದ ಬೆಂಗಳೂರಿನಲ್ಲಿರುವ Bangalore Water Supply & Sewerage Board" ಅದು ಈಗ "Bangalore water and Sewerage Supply Board" ಎಂದು ಪ್ರಸಿದ್ಧಿಯಾಗಿದೆ. ಆ ಪರಿಸ್ಥಿತಿಗೆ ಇವತ್ತು ಬಂದು ತಲುಪಿಬಿಟ್ಟಿದ್ದೇವೆ. ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಪೈಪು ಮತ್ತು ಒಳಚರಂಡಿ ಪೈಪು ಒಟ್ಟಿಗೆ ಪಕ್ಕಪಕ್ಕದಲ್ಲಿ ಬಂದು ಒಳಚರಂಡಿ ನೀರು ತುಂಬಿಕೊಂಡು ಆ ನೀರು ಕುಡಿಯುವ ನೀರಿನಲ್ಲಿ ಸೇರಿ ಅದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಜಾಂಡೀಸ್ ಕಾಯಿಲೆಯನ್ನು ಆಗಾಗ್ಗೆ ನೋಡುತ್ತಿದ್ದೇವೆ. ಮಾನ್ಯ ಸೋಮಣ್ಣನವರು ಮಾತನಾಡುತ್ತ, ನನ್ನ ಕ್ಷೇತ್ರದಲ್ಲಿ ಈ ರೀತಿಯಾಯಿತು, ರೋಷನ್‌ಬೇಗ್‌ರವರ ಕ್ಷೇತ್ರದಲ್ಲಾಯಿತು ಎಂದು ಹೇಳಿದರು. ಈಗ ಮಾನ್ಯ ಸಚಿವರ ಕ್ಷೇತ್ರದಲ್ಲಾಗುತ್ತದೆಂದು ಕಾಣುತ್ತದೆ. ಆದರೆ ಆ ರೀತಿಯಾಗುವುದು ಬೇಡ. ಇಡೀ ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಒಳಚರಂಡಿ ಸಮಸ್ಯೆಯಿದೆ ಅದಕ್ಕೆ ಪರಿಹಾರವನ್ನು ಹುಡುಕಬೇಕು.

ಶ್ರೀ ವಿ.ಸೋಮಣ್ಣ:- ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಆ ರೀತಿಯಾಗಿದ್ದು 1991-92, 93ರಲ್ಲಿ. ಸೋಮಣ್ಣನವರು ಶಾಸಕರಾದಮೇಲೆ ಆ ರೀತಿಯಾಯಿತೆಂದು ತಾವು ತಿಳಿದುಕೊಂಡಿದ್ದೀರಿ. ತಮಗೆ ಯಾರಮೇಲೂ ಕಣ್ಣಿಲ್ಲ. ನನ್ನೊಬ್ಬನ ಮೇಲೆಯೇ ಕಣ್ಣು ಎಂದು ಕಾಣಿಸುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್:- ಆನಂತರ ಬಹಳ ದೊಡ್ಡ ಸಮಸ್ಯೆಯೇನೆಂದರೆ, ಎಲ್ಲರೂ 50-60 ವರ್ಷಗಳ ಹಿಂದೆ ಹಾಕಿರತಕ್ಕ ಪೈಪುಗಳೆಂದು ಹೇಳುತ್ತಿದ್ದಾರೆ. ಅದರೆ ಬೆಂಗಳೂರಿನಲ್ಲಿ ಅಪಾರ್ಟ್‌ಮೆಂಟ್ಸ್‌ನ್ನು ಕಟ್ಟುವವರು ಯಾರಿದ್ದಾರೆ ಅವರ ಹತ್ತಿರ ಹೋಗಿ ಆ ರಸ್ತೆಯಲ್ಲಿ ಎಷ್ಟು ವ್ಯಾಸದ ಪೈಪು ಇದೆ, ಅದು ಅಪಾರ್ಟ್‌ಮೆಂಟ್‌ನಿಂದ

ಬರತಕ್ಕ ನೀರಿನ ಲೋಡ್‌ನ್ನು ತಡೆದುಕೊಳ್ಳುತ್ತದೆಯೇ ಎಂಬ ಬಗ್ಗೆ ಯಾರು ಸಹ ಯೋಚನೆ ಮಾಡುತ್ತಿಲ್ಲ. ಅಕಸ್ಮಾತ್ ಆ ಪೈಪು ಅಪಾರ್ಟ್‌ಮೆಂಟ್‌ನಿಂದ ಬರತಕ್ಕ ಲೋಡನ್ನು ತಡೆಯದಿದ್ದರೆ ಆ ಅಪಾರ್ಟ್‌ಮೆಂಟ್‌ನವರ ಹತ್ತಿರ ವೆಚ್ಚವನ್ನು ಭರಿಸಿ ಹೆಚ್ಚಿನ ವ್ಯಾಸದ ಪೈಪುಗಳನ್ನು ಹಾಕಬೇಕಾಗಿದೆ. ಇವತ್ತು ವಾಟರ್ ಸಪ್ಲೈ ಬೋರ್ಡ್‌ನ ಹತ್ತಿರ ಟ್ರೀಟ್‌ಮೆಂಟ್ ಪ್ಲಾಂಟ್ ಇದೆ. ಅಪಾರ್ಟ್‌ಮೆಂಟ್‌ಗಳಿಂದಾಗಿ ಅಲ್ಲಿಂದ ಬರುವ ನೀರಿನ ಒತ್ತಡವನ್ನು ಪೈಪುಗಳು ತಡೆದುಕೊಳ್ಳದೆ ಒಳಚರಂಡಿ ನೀರು ಹೊರಗೆ ಹರಿದು ಹೋಗುತ್ತಿರುವುದರಿಂದ ತಮ್ಮ ಟ್ರೀಟ್‌ಮೆಂಟ್ ಪ್ಲಾಂಟಿಗೂ ಸಾಕಷ್ಟು ನೀರು ಬರುತ್ತಿಲ್ಲ. ಇವೆಲ್ಲದರ ದೃಷ್ಟಿಯಿಂದ ಬೆಂಗಳೂರಿಗೆ ಒಂದು ಸಮಗ್ರವಾದ ಯೋಜನೆ ಮಾಡಬೇಕು. ಒಳಚರಂಡಿಯ ಸಮಸ್ಯೆಯೇನಿದೆ ಅದನ್ನು ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಒಟ್ಟಿನಲ್ಲಿ ಬೆಂಗಳೂರಿನ ಸಮಸ್ಯೆಗಳೇ ಹೆಚ್ಚಾಗಿದೆ, ಜನಸಂಖ್ಯೆಯೇ ಜಾಸ್ತಿಯಾಗಿದೆ. ಇದು ಅನೇಕ ದಶಕಗಳಿಂದ ಇದ್ದುಕೊಂಡು ಬಂದಿದೆ, ನಾವೆಲ್ಲರೂ ಈ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇದಕ್ಕೆ ತಕ್ಷಣ ಪರಿಹಾರವಿಲ್ಲ. ಒಂದು ಕಡೆ ಈ ಸಮಸ್ಯೆಗಳಿಗೆ ಸಮಗ್ರವಾದ ಯೋಜನೆ ಮಾಡಬೇಕೆಂದು ತಾವು ಹೇಳುತ್ತೀರಿ. ಅದೇ ಮೆಗಾಸಿಟಿ ಯೋಜನೆ. ನಾನು ಮೆಗಾಸಿಟಿ ಯೋಜನೆಯನ್ನು ಎಲ್ಲಾ ಸಮಸ್ಯೆಗಳಿಗೆ ನೆಪವಾಗಿ ಹೇಳುತ್ತಿಲ್ಲ. ಅದನ್ನು ಇತ್ತೀಚೆಗೆ ಹುಟ್ಟಿಹಾಕಿಲ್ಲ ಅನೇಕ ವರ್ಷಗಳ ಹಿಂದೆ ಮೆಗಾಸಿಟಿ ಯೋಜನೆಯನ್ನು ಜಾರಿಗೆ ತರಬೇಕೆಂದು ಕಾನ್‌ಸೆಪ್ಟ್ ಇತ್ತು. ಆ ಯೋಜನೆಯ ಅಡಿಯಲ್ಲಿ ನೀರಿನ ಸರಬರಾಜು, ಪೈಪುಗಳ ವಿನ್ಯಾಸವನ್ನು ಹೆಚ್ಚು ಮಾಡುವುದು, ಫ್ಲೈ ಓವರ್ಸ್‌ಗಳು, ಮಾಸ್ ರ್ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಂಗಳ ಜೊತೆಯಲ್ಲಿ ಕೊಳಚೆ ನಿರ್ಮೂಲನೆಯ ವಿಚಾರವು ಸೇರಿದೆ. ಇದಲ್ಲದೆ ಇನ್ನೂ ಅನೇಕ ವಿಚಾರಗಳು ಇವೆ. ಮೊದಲು ರಿಂಗ್ ರೋಡ್ ಮಾಡಬೇಕೆಂದಿತ್ತು, ಅನಂತರ ಅದು ಇಂಟರ್ ಮಿಡಿಯೇಟ್, ಔಟರ್ ರಿಂಗ್ ರೋಡ್ ಎಂದು ಹೀಗೆಲ್ಲಾ ಬದಲಾವಣೆಯಾಗಿ ಪ್ರತಿ ವರ್ಷ ಯೋಜನೆಗಳು ಬದಲಾಗುತ್ತಿದೆ. ಒಟ್ಟಿನಲ್ಲಿ ಇವೆಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಸಿಕ್ಕಾಪಟ್ಟೆ ಹಣಬೇಕಾಗುತ್ತದೆ. ಅದರ ಬಗ್ಗೆ ಸಹ ಪ್ರಯತ್ನ ಮಾಡುತ್ತಿದ್ದೇವೆ. ಈ ಸರ್ಕಾರ ಅದರ ಬಗ್ಗೆ ಗಂಭೀರವಾದ ಪ್ರಯತ್ನಗಳನ್ನು ಮಾಡುತ್ತಿದೆ. ಈಗ ಏನೇನು ಸಮಸ್ಯೆಗಳಿದೆ ಅದರಲ್ಲಿ ತುರ್ತಾಗಿ ಏನು ಮಾಡಬೇಕು ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ. ಅದರ ಜೊತೆಯಲ್ಲಿ ಹೊಸ ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತೇವೆ ಎಂದು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ.

+ ಶ್ರೀ ಪ್ರಮೀಳಾನೇಸರ್ಗಿ (ಚಾಮರಾಜ ಪೇಟೆ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹಣವನ್ನು ಖರ್ಚು ಮಾಡಿರುವ ಮಾಹಿತಿ ಕೊಟ್ಟಿದ್ದಾರೆ. ಅದರೆ ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಬ್ರೇಕ್‌ಅಪ್ ಮಾಹಿತಿಯನ್ನು ಕೊಡಬೇಕು. 'Res ipsa loquitor' ಅಂದರೆ things will

speak for themselves. ಎಂದು ಅರ್ಥ. ಯಾವ್ಯಾವ ಕ್ಷೇತ್ರದಲ್ಲಿ ಏನೇನು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಡೀ ಬೆಂಗಳೂರಿನ ಒಳಚರಂಡಿ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರ ಮತ್ತು ಮಾನ್ಯ ನಂಜೇಗೌಡರ ಕ್ಷೇತ್ರವಾದ ಬಸವನಗುಡಿಯಲ್ಲಿರತಕ್ಕಂಥ ಕೆಂಪಾಂಬುಧಿ ಕೆರೆಗೆ ತೆಗೆದುಕೊಂಡು ಹೋಗಿ ಸುರಿಯುತ್ತಿದ್ದಾರೆ. ಬೇರೆ ವ್ಯವಸ್ಥೆಯನ್ನೇ ಮಾಡಿಲ್ಲ. ಅದು ಈಗ ಸೊಳ್ಳೆಯ ಬ್ರೀಡಿಂಗ್ ಕೇಂದ್ರವಾಗಿಬಿಟ್ಟಿದೆ. ಇಡೀ ಬೆಂಗಳೂರಿನ ಜನರಿಗೆ ಹೆಲ್ತ್ ಹೆಜಾರ್ಡ್ ಆಗತಕ್ಕ ಮತ್ತು ಸ್ವಲ್ಪ ದಿವಸಗಳಲ್ಲಿ ಇಡೀ ಬೆಂಗಳೂರೇ ಕೊಳಚೆ ಪ್ರದೇಶವಾಗತಕ್ಕ ಪರಿಸ್ಥಿತಿ ಬರುತ್ತಿದೆ. ಇದರ ಬಗ್ಗೆ ಯಾರು ಸಹ ಗಮನ ಹರಿಸಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಕೆಂಪಾಂಬುಧಿ ಕೆರೆಗೆ ಬೆಂಗಳೂರಿನ ಒಳಚರಂಡಿ ನೀರನ್ನು ಬಿಡುವುದನ್ನು ತಪ್ಪಿಸಬೇಕು, ಅದಕ್ಕೆ ಬೈಪಾಸ್ ಅಥವಾ ಬೇರೆ ವ್ಯವಸ್ಥೆಯನ್ನು ಮಾಡಲು ತಕ್ಷಣ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತು ನನ್ನ ಕ್ಷೇತ್ರದಲ್ಲಿ ಸ್ಟಾರ್ಮ್ ವಾಟರ್‌ನ ಡ್ರೈನ್ಸ್ ಎಲ್ಲೂ ಇಲ್ಲ. ಕಬ್ಬನ್‌ಪೇಟೆ ಮತ್ತು ಕಳಾಸಿಪಾಳ್ಯಂನಲ್ಲಿ ಸ್ಟಾರ್ಮ್ ವಾಟರ್ ಡ್ರೈನ್ಸ್ ಇಲ್ಲವೇ ಇಲ್ಲ. ಕೆಲವು ಕಡೆಗಳಲ್ಲಿ ಡ್ರೈನೇಜೇ ಇಲ್ಲ. ನಾನು ಶಾಸಕಿಯಾಗಿ ಬಂದಮೇಲೆ ಅಲ್ಲಿನ ಅಧಿಕಾರಿಗಳಿಗೆ ಕರೆದುದುಕೊಂಡು ತೋರಿಸಿದಾಗ ಅವರು ಕಿರ್ಲೋಸ್ಕರ್‌ಗೆ ಹೇಳಿದ್ದೇವೆ ಮಾಸ್ಟರ್‌ಪ್ಲಾನ್ ತರಿಸಿ ಇದನ್ನು ಮಾಡುತ್ತೇವೆಂದು ಹೇಳಿದ್ದರು. ಬೆಂಗಳೂರಿನ ಹೃದಯ ಭಾಗದಲ್ಲಿರುವ ಕಬ್ಬನ್‌ಪೇಟೆ ಮತ್ತು ಕಳಾಸಿಪಾಳ್ಯರ ಪ್ರದೇಶದಲ್ಲಿ ಸ್ಟಾರ್ಮ್ ವಾಟರ್ ಡ್ರೈನ್ ಪದ್ಧತಿ ಇಲ್ಲದಿರುವುದರಿಂದ ಇಲ್ಲಿ ಯಾವ ಸ್ಥಿತಿ ಇದೆಯೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾವು ಈ ಯೋಜನೆಯಲ್ಲಿ ಇದನ್ನೂ ಸೇರಿಸಿಕೊಂಡು ಅಥವಾ ಮುಂದೆ ಬರತಕ್ಕ ಬಜೆಟ್‌ನಲ್ಲಿ ಇದನ್ನು ಸೇರಿಸಿಕೊಂಡು ನಗರದ ಮಧ್ಯಭಾಗದಲ್ಲಿರುವ ಈ ಜಾಗಕ್ಕೆ ಸ್ಟಾರ್ಮ್ ವಾಟರ್ ಡ್ರೈನ್ ವ್ಯವಸ್ಥೆಯನ್ನು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಲು ಏರ್ಪಾಡು ಮಾಡಬೇಕು. ಇವತ್ತು ಇರುವ ಒಳಚರಂಡಿ ವ್ಯವಸ್ಥೆಯಲ್ಲಿ ಅದರ ನೀರು ಬಾವಿಗಳಿಗೆ ಹರಿದುಹೋಗತಕ್ಕ ಪರಿಸ್ಥಿತಿ ಇದೆ. ಜನರು ಬಾವಿಯ ನೀರನ್ನು ಕುಡಿಯಲು ಸಾಧ್ಯವಾಗುತ್ತಿಲ್ಲ. ಕುಡಿಯುವ ನೀರಿನಲ್ಲಿ ಒಳಚರಂಡಿ ಮಿಶ್ರಣವಾಗಿ ಜನರು ಬಹಳ ತೊಂದರೆಪಡುತ್ತಿದ್ದಾರೆ. ಇದನ್ನು ತಪ್ಪಿಸಲು ತಾವು ಏನು ವ್ಯವಸ್ಥೆ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ನಾನು ಗಮನಸೆಳೆಯುವ ಪ್ರಶ್ನೆಗೆ ಏನು ಮಾಹಿತಿ ಬೇಕಾಗಿತ್ತೋ ಅದರ ಬಗ್ಗೆ ಮಾತ್ರ ತಯಾರಾಗಿ ಬಂದಿದ್ದೆ. ಶ್ರಿಮತಿ ಪ್ರಮಿಳಾ ನೇಸರ್ಗಿಯವರು ಕೇಳಿರುವ ಎಲ್ಲಾ ವಿಚಾರದ ಬಗ್ಗೆ ನಾನು ಮಾಹಿತಿಯನ್ನು ತಂದಿಲ್ಲ. ಈಗ ನ್ಯಾಚುರಲ್ ವ್ಯಾಲಿಯ ಕಡೆಗಳಲ್ಲೂ ಜನರು ಮನೆಗಳನ್ನು ಕಟ್ಟುತ್ತಿದ್ದಾರೆ. ಒಂದು ಸ್ಟಾರ್ಮ್ ವಾಟರ್ ಡ್ರೈನ್‌ಕಟ್ಟಬೇಕೆಂದರೆ ಸಮಸ್ಯೆಗಳು ಇದೆ. ಉದಾಹರಣೆಗೆ, ನನ್ನ ಕ್ಷೇತ್ರವೊಂದರಲ್ಲಿ ಒಂದು ವರ್ಷದ ಹಿಂದೆ 48ಲಕ್ಷ ರೂಪಾಯಿಗಳು ಮಂಜೂರಾಗಿದೆ ಆದರೆ ಎಲ್ಲಾ ವಿಚಾರ ಕೋರ್ಟ್‌ಗೆ ಹೋಗಿದ್ದರಿಂದ ಯಾವುದೇ ಕೆಲಸವನ್ನು

ತೆಗೆದುಕೊಳ್ಳಲು ಆಗಿಲ್ಲ. ನಾಳೆ ನಾನು ನಗರಪಾಲಿಕೆಯ ಮೆಯೋಹಾಲ್‌ನಲ್ಲಿ ಎಲ್ಲಾ ನಗರ ಶಾಸಕರ ಸಭೆಯನ್ನು ಕರೆದಿದ್ದೇನೆ. ಅಲ್ಲಿ ಎಲ್ಲಾ ವಿಚಾರಗಳನ್ನು ತಮ್ಮ ಮುಂದಿಡುತ್ತೇನೆ.

SRI N.RAJANNA:- When there is no infrastructure, why the Bangalore City Coroporation is allowing multi-stroeyed buildings within the old city?

ಶ್ರೀ ಪಿ.ಹೆಚ್.ಪ್ರಕಾಶ್:- ಸ್ಯಾಂಕ್ಷನ್ ಆಗಿರತಕ್ಕ ಕೆಲಸವು ಪೋಲೀಸ್ ಇಲಾಖೆಯವರಿಂದ ತಡೆಯಾಗುತ್ತಿದೆ. ಅದರ ಬಗ್ಗೆ ಒಂದು ಮಾಹಿತಿಯನ್ನು ಹೇಳಿಬಿಡುತ್ತೇನೆ.

+ ಶ್ರೀ ಬಿ.ಮುನಿಯಪ್ಪ (ಗಾಂಧಿನಗರ):- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಒಳಚರಂಡಿ ವ್ಯವಸ್ಥೆ ಬಗ್ಗೆ ಗಮನವನ್ನು ಸೆಳೆದಿರುವಂತಹ ಸಂದರ್ಭದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರು ಕೆಲವೊಂದು ವಿವರಗಳನ್ನು ಸದನಕ್ಕೆ ಕೊಟ್ಟಿದ್ದಾರೆ. ಎಲ್ಲಾದರೂ ಚೇಂಬರ್ ಮುಚ್ಚಳ ಹೋದರೆ, ಮುಚ್ಚಳವನ್ನು ಬದಲಾಯಿಸುತ್ತೇವೆ, ಎಲ್ಲಾದರೂ ಕಸ ಕಟ್ಟಿಕೊಂಡರೆ ಕಸವನ್ನು ಕ್ಲೀನ್ ಮಾಡುವುದಕ್ಕೆ ಯಂತ್ರ ಇದೆ, 1992-93ರಲ್ಲಿ ಎಷ್ಟು ಖರ್ಚು ಮಾಡಿದ್ದೇವೆ ಎಂಬ ಅಂಕಿ ಅಂಶಗಳನ್ನು ಮಾನ್ಯ ಸಚಿವರು ಸದನಕ್ಕೆ ನೀಡಿದರು. ಬೆಂಗಳೂರಿನ ಸಮಸ್ಯೆ ಇವತ್ತು ಏನು ಎಂದು ಕೇಳುವಾಗ, ಬೆಂಗಳೂರು ನಗರಪಾಲಿಕೆಯ ಸದಸ್ಯರಾಗಿದ್ದಂತಹ ನನಗೆ ಕೆಲವು ವಿಶೇಷವಾದಂತಹ ಅನುಭವಗಳಿವೆ. ಇವತ್ತು ಸ್ಯಾನಿಟರಿ, ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ, ಮೊದಲನೆಯದಾಗಿ ಒಂದು ಬಡಾವಣೆ ಇದೆ ಎಂದು ಹೇಳುವುದಾದರೆ, 2-3 ಕಾರ್ಪೊರೇಷನ್ ಡಿವಿಜನ್ಸ್ ಸೇರಿದರೆ ಒಂದು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಆಫೀಸ್ ಇರುತ್ತದೆ, ಅಲ್ಲೊಬ್ಬ ಜೆ.ಇ. ಇರುತ್ತಾನೆ, 3-4 ಆಫೀಸ್‌ಗೆ ಒಬ್ಬ ಎ.ಇ.ಇ. ಇರುತ್ತಾನೆ, 3-4 ಜನರು ಅಲ್ಲಿ ಒಳಚರಂಡಿ ಕೆಲಸ ಮಾಡುವಂತಹ ಕಾರ್ಮಿಕರು ಇರುತ್ತಾರೆ. ಈಗ ಬಹಳ ಅವಶ್ಯಕತೆ ಇರುವುದು ಮಾನ್ಯ ಮಂತ್ರಿಗಳು ಗಮನಿಸಬೇಕು ಒಳಚರಂಡಿ ಕಟ್ಟಿಕೊಂಡರೆ ರಿಪೇರಿ ಮಾಡುವಂತಹವರು 3-4 ಜನರು ಆ ಕಾರ್ಮಿಕರೇನು ಇರುತ್ತಾರೆ ಅವರೇ 3-4 ಕಾರ್ಪೊರೇಷನ್ ಡಿವಿಜನ್ ಅನ್ನು ಕ್ಲೀನ್ ಮಾಡುವಂತಹ ವ್ಯವಸ್ಥೆ ಇರುತ್ತದೆ. ಬೆಂಗಳೂರು ನಗರದಲ್ಲಿ ಯಾವುದೇ ಭಾಗದಲ್ಲಿ ಹೋದರೂ ಕೂಡ ಇವತ್ತು ನಾವು ವಾಹನದಲ್ಲಿ ಹೋಗಬಹುದು, ನಡೆದುಕೊಂಡು ಹೋಗಬಹುದು, ಯಾವುದೇ ರೀತಿ ಹೋದರೂ ಕೂಡ, ಎಲ್ಲಿ ನೋಡಿದರೂ ಒಳಚರಂಡಿ ಕಟ್ಟಿಕೊಂಡು ನೀರು ಹರಿದು ಹೋಗುತ್ತಿರುತ್ತದೆ. ಸಂಬಂಧಪಟ್ಟವರ ಗಮನಕ್ಕೆ ತರುವಾಗ, ನಾವು ಆಫೀಸ್‌ಗೆ ಖುದ್ದಾಗಿ ಹೋಗಿ ಭೇಟಿ ಮಾಡಿ ನೋಡುವಾಗ, ಪಾಪ 3-4 ಜನರಲ್ಲಿ ಒಂದಿಬ್ಬರು ಫಿಸಿಕಲ್ಲಾಗಿ ಹ್ಯಾಂಡಿಕ್ಯಾಪ್ಡ್ ಆಗಿರುತ್ತಾರೆ. ವಯಸ್ಸಾಗಿರುತ್ತದೆ, ಅವರು ಮೈ ಬಗ್ಗಿಸುವುದಕ್ಕಾಗುವುದಿಲ್ಲ, ಹೊರಗಡೆ ಹೋಗಿ ಕೆಲಸ

ಮಾಡಲಿಕ್ಕೆ ಅವರಿಗೆ ಆಗುವುದಿಲ್ಲ. ಸರ್ಕಾರ ಅರ್ಜೆಂಟಾಗಿ ಮಾಡಬೇಕಾಗಿರತಕ್ಕಂತಹ ಕೆಲಸ ಏನೆಂದರೆ, ಆ 3-4 ಜನ ನಾಲ್ಕೈದು ಡಿವಿಜನ್‌ಗಳಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಆದ್ದರಿಂದ ಹೆಚ್ಚು ಜನರನ್ನು ತೆಗೆದುಕೊಳ್ಳಬೇಕು, ಒಳಚರಂಡಿಯು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಅದನ್ನು ಕ್ಲೀನ್ ಮಾಡುವುದಕ್ಕೆ ಒಂದು ಸೂಕ್ತವಾದ ವ್ಯವಸ್ಥೆ ಆಗಬೇಕು. ಅದಾದ ಮೇಲೆ ಈ ಕೆಂಪೇಗೌಡರು ಬೆಂಗಳೂರು ನಗರವನ್ನು ಕಟ್ಟಿ, ನಾಲ್ಕು ಕಡೆ ಗೋಪುರ ಕಟ್ಟಿ ನಿರ್ಮಾಣ ಮಾಡಿದ್ದಾರಲ್ಲ, ಅದರ ಮೂಲರಷ್ಟು ಇವತ್ತು ಬೆಂಗಳೂರು ಬೆಳೆದು ಹೋಗಿ ಏನಾಗಿದೆ ಎಂದರೆ, ಇಲ್ಲಿ ಯಾವ ಕಾಲದಲ್ಲಿ, ಎಲ್ಲಿ ಎಷ್ಟು ಇಂಚು ಪೈಪಿದೆ ಅಂತ ಯಾವುದೇ ಆಫೀಸ್‌ಗಳಾಲ್ಲಾಗಲೀ ಅವುಗಳ ಬಗ್ಗೆ ದಾಖಲಾತಿಯಿಲ್ಲ, ಚರಿತ್ರೆಯಿಲ್ಲ. ಭೂಮಿ ಅಗೆಯಬೇಕು, ಭೂಮಿ ಅಗೆದ ಮೇಲೆ ಅಲ್ಲಿ ಎಷ್ಟು ಇಂಚು ಪೈಪ್ ಇದೆ ಎಂಬುದನ್ನು ನೋಡಬೇಕು. ಇವತ್ತು ಹೊಸದಾಗಿ ಒಂದು ನಾಲ್ಕು ಇಂಚು ಪೈಪ್ ಒಂದು ಕಡೆ ಇರುತ್ತದೆ, ಅದನ್ನು ಅಲ್ಲಿ ಬರುವಂತಹ ಲೋಡ್ ಅನ್ನು ಅವಲಂಬಿಸಿ ಆ ಪೈಪ್ ಅನ್ನು ಆರು ಇಂಚೋ, ಎಂಟು ಇಂಚೋ, ಹತ್ತು ಇಂಚೋ, ಮಾಡಬೇಕಾದರೆ, ಅಲ್ಲಿ ಒಂದು ಜಲಮಂಡಳಿ ಏನಿದೆ, ಅವರು ಹಣವನ್ನು ನಾವು ಕಾರ್ಪೊರೇಷನ್‌ಗೆ ಕಟ್ಟಬೇಕೆಂದು ಹೇಳುತ್ತಾರೆ. ಕಾರ್ಪೊರೇಷನ್‌ನವರು ಎಸ್ಟಿಮೇಟ್ ಮಾಡಿ ಕಳುಹಿಸುವಾಗ ಒಂದು ವರ್ಷ ಆಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಎಲ್ಲಿ ಒಂದು ನಾಲ್ಕು ಇಂಚಿನ ಸಣ್ಣ ಪೈಪ್ ಇರುತ್ತದಯೋ, ಅದನ್ನು ದೊಡ್ಡ ಪೈಪ್ ಅನ್ನಾಗಿ ಪರಿವರ್ತನೆ ಮಾಡಬೇಕೋ ಅದನ್ನು ಜಲ ಮಂಡಳಿಯ ಖರ್ಚಿನಲ್ಲೇ ಆದಷ್ಟು ಬೇಗ ಮಾಡುವ ವ್ಯವಸ್ಥೆ ಮಾಡಿದರೆ ಬೆಂಗಳೂರಿನಲ್ಲಿ ಈ ಸಮಸ್ಯೆ ಸುಧಾರಿಸುತ್ತದೆ ಎಂಬುದು ನನ್ನ ಅನಿಸಿಕೆಯಾಗಿದೆ. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ಎಷ್ಟೋ ಕಡೆ ಮಂತ್ರಿಗಳೇ ಹೇಳಿದಂತೆ, ಈ ಮಳೆ ನೀರನ್ನು ಸ್ಯಾನಿಟರಿಯಲ್ಲಿ ಬಿಡುತ್ತಾರೆ, ಅದಕ್ಕೆ ತಕ್ಕಂಥ ವ್ಯವಸ್ಥೆಯಾಗದಿರುವ ಕಾರಣ, ಎಷ್ಟೋ ಜನರ ಮನೆಗಳಲ್ಲಿ, ಭಾಗ್ಯ ಜ್ಯೋತಿ ಸ್ಕೀಮ್‌ನಲ್ಲಿ ಕಟ್ಟಿಸಿರುವಂತಹ ಮನೆಗಳವರೂ ಕೂಡ ಇದರಲ್ಲೇ ಬಿಡುತ್ತಾರೆ. ಅದು ಬದಲಾವಣೆ ಆಗಬೇಕು. ಜಲಮಂಡಳಿಯವರು ಇವತ್ತು ಕಾರ್ಮಿಕರನ್ನು ಹೆಚ್ಚು ತೆಗೆದುಕೊಳ್ಳದಿರುವಂತಹ ಒಂದು ಸನ್ನಿವೇಶ ಇರುವುದರಿಂದ, ಕಾರ್ಮಿಕರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಮಾನ್ಯ ಮಂತ್ರಿಗಳು ಸಿಟಿ ಶಾಸಕರನ್ನೆಲ್ಲಾ ಕರೆಯಿಸಿಕೊಂಡು ಬೆಂಗಳೂರು ನಗರದಲ್ಲಿರತಕ್ಕ ಜಲಮಂಡಳಿಯ ಕಾರ್ಮಿಕರು ಎಷ್ಟು ಜನರಿದ್ದಾರೆ? ಯಾವಯಾವ ಕಛೇರಿಯಲ್ಲಿ ಎಷ್ಟು ಇದ್ದಾರೆ? ಎಂಬುದನ್ನು ಒಮ್ಮೇ ಪರೀಕ್ಷೆ ಮಾಡಿದರೆ, ಅವರಿಗೆ ಮನದಟ್ಟಾಗುತ್ತದೆ ಎಂದು ನಾನು ತಿಳಿದಿದ್ದೇನೆ. ಅದೇ ರೀತಿಯಲ್ಲಿ ಇವತ್ತು ಬೆಂಗಳೂರಿನಲ್ಲಿ ಒಂದು ಕಡೆ ನೀರು ಸೋರಿ ಹೋಗುವುದು, ಮತ್ತೊಂದು ಕಡೆ ಈ ಸ್ಯಾನಿಟರಿ ಕಟ್ಟಿಕೊಂಡು ಹೋಗುವುದರಿಂದ, ಜನರನ್ನು ಈ ಕಾಟದಿಂದ ತಪ್ಪಿಸಬೇಕು, ತಾವು ಅಧಿಕಾರಿಗಳು ಬರೆದುಕೊಟ್ಟಂತಹ ಅಂಕಿ ಅಂಶಗಳನ್ನು ಇಲ್ಲಿ ಹೇಳಿ, ನಾವು ನಿಮ್ಮಿಂದ ಉತ್ತರ ಪಡೆದುಕೊಂಡು ಹೋದರೆ, ಈ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ತಾವು ಅದಷ್ಟು ಬೇಗ, ಸಿಟಿ ಶಾಸಕರ

ಸಭೆಗಳನ್ನು ಕರೆದು, ಜಲ ಮಂಡಳಿಯ ಅಧಿಕಾರಿಗಳನ್ನು ಕರೆದು, ಬೆಂಗಳೂರು ನಗರವನ್ನು ಒಮ್ಮೆ ಪ್ರದಕ್ಷಿಣೆ ಮಾಡಿ, ಎಲ್ಲೆಲ್ಲಿ ಏನೇನಿದೆ? ಎಂಬುದನ್ನು ಖುದ್ದಾಗಿ ಪರಿಶೀಲನೆ ಮಾಡಿದಾಗ ಮಾತ್ರ ತಮಗೆ ಸಮಸ್ಯೆ ಅರ್ಥವಾಗುತ್ತದೆ ಎಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ಬೆಂಗಳೂರು ನಗರದ ಜನ ಏನು ಆಕಾಶವನ್ನು ಭೂಮಿಗಿಳಿಸಿ ಕೊಡಿ ಎಂದು ಕೇಳುವುದಿಲ್ಲ, ನೀರು, ಒಳಚರಂಡಿ ವ್ಯವಸ್ಥೆ, ಲೈಟು ಇವುಗಳನ್ನು ಕೇಳುತ್ತಾರೆ. ಇದನ್ನು ನಾವು ನಗರಪಾಲಿಕೆಯ ಸದಸ್ಯರಾಗಿ, ಶಾಸಕರಾಗಿ ಅವರನ್ನು ತೃಪ್ತಿಪಡಿಸುವುದಕ್ಕೆ ಸಾಧ್ಯವಾಗದಿರುವಂತಹ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದ ಶಾಸಕರು ಇದ್ದೇವೆ ಎಂಬುದನ್ನು ತಮ್ಮ ಮುಖಾಂತಾರ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಈ ಕೆಲವೊಂದು ವಿಚಾರಗಳ ಬಗ್ಗೆ ಚರ್ಚಿಸಲು ಬೆಂಗಳೂರು ಶಾಸಕರ ಸಭೆಯನ್ನು ಕರೆದು ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯುತ್ತೀರಿ ಎಂದು ನನ್ನ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಅಷ್ಟು ಮಾಡಿ, ಬೆಂಗಳೂರು ನಗರದ ಶಾಸಕರನ್ನೆಲ್ಲಾ ಕರೆಯಿಸಿ ಮಾತನಾಡಿ.

SRI N.RAJANNA:- Sir, the matter is very serious. They are indirectly killing the people. ಬಹಳ ನೊಂದು ಸಾವಿರಾರು ಜನಕ್ಕೆ ಉತ್ತರ ಹೇಳಿ ಹೇಳಿ ಸಾಕಾಗಿದೆ. ನನಗೆ ನೋವಾಗುತ್ತಿದೆ. ಅದಕ್ಕೋಸ್ಕರ ನೊಂದು ಮಾತನಾಡುತ್ತಿದ್ದೇನೆ. ಕೆಲವು ಕಡೆಯಲ್ಲಿ ಕಸ ಎಸೆದು ಹೋಗುತ್ತಾರೆ ಸಾರ್, ಟಾಯ್ಲೆಟ್ ಬ್ಲಾಕಾಗಿ ಅದೆಲ್ಲಾ ವೇಸ್ಟ್ ಕಿಚನ್‌ಗೆ ಬಂದು, ದೇವರ ಮನೆಯಿಂದ ಫ್ರಂಟ್‌ಲ್ಲಿ ಬೆಂಗಳೂರಿನ ಕೆಲವು ಪಾಕೆಟ್ಸ್‌ನಲ್ಲಿ ಹೋಗುತ್ತಿದೆ ಸಾರ್. ಇದಕ್ಕಿಂತ ಕರ್ಮ ಏನು? ಬಹಳ ನೊಂದು ಹೇಳುತ್ತಿದ್ದೇನೆ, Sir, due to drainage blockages, the dirty water is entering into Kitchen and other rooms in some pockets of that area. The Govt. Should find out some solution to solve this problem. ಇದಕ್ಕೆ ಒಂದು ಸಲ್ಯೂಷನ್ ಕಂಡು ಹಿಡಿಯಲಿಲ್ಲ ಎಂದರೆ, ಸಾವಿರಾರು ಜನ ಇನ್‌ಡೈರೆಕ್ಟಾಗಿ ಸಾಯುವಂತಹ ಪರಿಸ್ಥಿತಿ ಬರುತ್ತದೆ.

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೇ, ತಮಗೆ ಆಗಲೇ ಹೇಳಿದ ಹಾಗೆ ನಾಳೆ ಬೆಳಿಗ್ಗೆ 9 ಗಂಟೆಗೆ ಬೆಂಗಳೂರು ನಗರದ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದೇನೆ. ಕಾರ್ಪೊರೇಷನ್‌ರವರು, ಬಿ.ಡಿ.ಎ.ನವರು ಮತ್ತು ಜಲಮಂಡಳಿಯವರು ಎಲ್ಲರೂ ಆ ಸಭೆಗೆ ಆಗಮಿಸಲಿದ್ದಾರೆ. ಅಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಅದರ ಬಗ್ಗೆ ಅವರಿಗೆ ಸಮಂಜಸವಾದ ಉತ್ತರವನ್ನು ಕೊಡುತ್ತೇನೆ.